ಎಂದು ಕೇಳುತ್ತಿದ್ದಾರೆ. ಅದು ಸಹ ಸರ್ಕಾರದ ಗಮನದಲ್ಲಿದ್ದು, ಅದನ್ನು ಪರಿಗಣಿಸುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ತೆಂಗಿನ ರೋಗ ಬಂತು. ಅಲ್ಲಿ 400 ಲೀಟರ್ ಪಿ.ಬಿ. ಕೆಮಿಕಲ್ಸ್ ಇತ್ತು. ನಾವು ಅವರಿಗೆ ಪತ್ರ ಬರೆದುಕೊಂಡು ಸರ್ಕಾರ ಸ್ವಲ್ಪ ಕಷ್ಟದಲ್ಲಿ ಇದೆ ಎಪಿಎಂಸಿ ಹಣದಲ್ಲಿ ಸ್ವಲ್ಪ ಹಣವನ್ನು ಇಂತಹ ನಿರ್ವಹಣೆ ಕಾರ್ಯಕ್ರಮಗಳಿಗೆ ಕೊಡಿ. ಎಂದು ಹೇಳಿದೆವು. ತೆಂಗಿನ ಬೆಳೆಗಾರರು ಪಂಪ್‌ಸೆಟ್‌ಗಳಿಗೆ ಏನಾದರು ಸಬ್ಸಿಡಿಕೊಡಿ 7-8 ಕೋಟಿ ರೂಪಾಯಿಗಳನ್ನು ಎಪಿಎಂಸಿಯವರು ಇಟ್ಟುಕೊಂಡಿದ್ದಾರೆ. ಹೋದಸಲ ನಾವು ಇಲ್ಲಿ ಮಾತನಾಡುವಾಗ ಹೇಳಿದ್ದೇವೆ, ಒಂದೆರಡು ಪರ್ಸೆಂಟ್ ನಮ್ಮ ರೀಸರ್ಚ್ ಸ್ಟೇಷನ್‌ಗೆ ಅಸಿಸ್ಟ್ ಮಾಡಿ, ಇಂತಹ ಕಾರ್ಯಕ್ರಮಗಳು ಏನಾದರೂ ಮಾಡಿ, ಎಲ್ಲಾ ರಸ್ತೆ ಮಾಡುವ ಕಾರ್ಯಕ್ರಮಕ್ಕೆ ಬಂದರೆ ಹೇಗೆ? ತಾವು ಆ ಕಡೆ ಯೋಚನೆ ಮಾಡಬೇಕು. ಅಯಾಯ ಎ.ಪಿ.ಎಂ.ಸಿ.ಗೆ ಬರುವ ಪ್ರೊಡ್ಯೂಸ್ ಸಂಬಬುಂಧಪಟ್ಟ ಬೆಳೆ ಎನು ಇರುತ್ತದೆ, ಆ ಬೆಳೆ ಇಂಪ್ರೂವ್ ಮಾಡುವುದಕ್ಕೆ ಆದರೂ ನೀವು ಸ್ವಲ್ಪ ಸೆಸ್ ಅನ್ನು ಆ ಕಡೆ ಡೈವರ್ಟ್ ಮಾಡಿಕೊಡಬೇಕು. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕು. ಅದಕ್ಕೆ ಸಂಬಂಧಪಟ್ಟ ಆರ್ ಅಂಡ್ ಡಿ ಡೆವಲಪ್‌ಮೆಂಟ್ ಮಾಡುವುದಕ್ಕೆ ಎ.ಪಿ.ಎಂ.ಸಿಯವರು ಸಹಾಯ ಮಾಡಬೇಕು. ಉಗ್ರಾಣಗಳಲ್ಲಿ 15 ದಿವಸ ಒಂಡೆರಡು ತಿಂಗಳುಗಳವರೆಗೆ ಮಾಲು ಇಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಆ ಭಾಗದಲ್ಲಿ ಕೊಬ್ಬರಿ ಬೆಳೆಯುತ್ತೇವೆ, ಏನಾದರೂ ಬೆಳೆ ಬೆಳೆಯುತ್ತೇವೆ. ಅದಕ್ಕೆ ಖರ್ಚು ಮಾಡುವಂತಹ ದುಡ್ಡನ್ನು ನೀವು ರೋಡಿಗೆ ಖರ್ಚು ಮಾಡುವುದು ಸಮಯೋಚಿತ ಇದಕ್ಕೆ ಸರಿಯಾದಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆಯೇ ಎಂದು ಪುನ: ಪರಿಶೀಲನೆ ಮಾಡಬೇಕು. ಮತ್ತು ಸಮಗ್ರವಾಗಿ ಹಂಚಿಕೆ ಮಾಡಿಕೊಡುವ ಬಗ್ಗೆ ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್. ನಾಗಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳತಕ್ಕಂಥ ವಿಚಾರ ನಿಜವಾಗಿದೆ. ಇದನ್ನು ನಾವು ಮುಂದೆ ತಿದ್ದುಪಡಿ ಮಾಡತಕ್ಕಂಥ ಸಮಯದಲ್ಲಿ ಅದನ್ನೆಲ್ಲಾ ಯೋಚನೆ ಮಾಡಿ ತಿದ್ದುಪಡಿ ಮಾಡುತ್ತೇವೆನ್ನುವ ಭರವಸೆ ಕೊಡುತ್ತೇವೆ.

ಬೆಂಗಳೂರಿನಲ್ಲಿರುವ ರೇಡಿಯೋ ಟ್ಯಾಕ್ಸಿಗಳಿಗೆ ಪರವಾನಗಿ.

52(174) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ನೀಡಿರುವ ರೇಡಿಯೋ ಟ್ಯಾಕ್ಸಿಗಳ ಪರವಾನಗಿ ಸಂಖ್ಯೆ ಎಷ್ಟು?

ಅ) ಇವುಗಳಿಗೆ ಸರ್ಕಾರ ನಿಗಧಿಪಡಿಸಿರುವ ದರಗಳೆಷ್ಟು?

ಇ) ಇವುಗಳಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು?

ಈ) ಈ ಪರವಾನಗಿಗಾಗಿ ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು?

ಉ) 1999 ರಲ್ಲಿ ಬೆಂಗಳೂರು ನಗರದಲ್ಲಿ ಹೊಸದಾಗಿ ಎಷ್ಟು ಪರವಾನಗಿಗಳನ್ನು ನೀಡಲಾಗುವುದು.

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಏಳು ಪರವಾನಗಿಗಳು

ಅ) 4 ಕಿ.ಮಿ.ವರೆಗೆ ಕನಿಷ್ಠ ರೂ.30.00 ನಂತರ ಪ್ರತಿ ಕಿ.ಮಿ. ರೂ.8.00 ರಂತೆ ನಿಗಧಿಪಡಿಸಲಾಗಿದೆ.

ಇ) ರೂ.43,992.00 (ವಾಹನ ತೆರಿಗೆ ರೂಪದಲ್ಲಿ).

ಈ) 95 ಅರ್ಜಿಗಳು

ಉ) ಪರವಾನಗಿ ಸಂಖ್ಯೆಯ ಬಗ್ಗೆ ಯಾವುದೇ ನಿಬಂಧನೆ ಇರುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ನಾನು ರೇಡಿಯೋ ಟ್ಯಾಕ್ಸಿಗಳ ಪರವಾನಗಿಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇ. ಅದಕ್ಕೆ 7 ಟ್ಯಾಕ್ಸಿಗಳಿಗೆ ಪರರವಾನಗಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ 40-50 ಲಕ್ಷ ಜನ ಸಂಖ್ಯೆ ಏನು ಇದೆ ಅದಕ್ಕೆ ಈಗ ಇರತಕ್ಕಂಥಾದ್ದು ಸಾಕಾಗುವುದಿಲ್ಲ. ಅದುದರಿಂದ ಈಗ ದೆಹಲಿಯಲ್ಲಿ ಅಲ್ಲಲ್ಲಿ ಏನು ಸ್ಟ್ಯಾಂಡ್‌ಗಳು ಮಾಡಿದ್ದಾರೆ ಆ ರೀತಿಯಾಗಿ ಮಾಡಿ, ಮತ್ತೆ ಈ ಲೈಸನ್ಸ್ ಕೊಡುವಾಗ ನಿರುದ್ಯೋಗಿ ಪದವಿಧರರು ಯಾರಿದ್ದಾರೆ ಅವರಿಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ನಾವು ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಈ ಟ್ಯಾಕ್ಸಿಗಳನ್ನು ಪ್ರಾರಂಭ ಮಾಡಿದ್ದೇವೆ. ನಾವು 7 ರೇಡಿಯೋ ಟ್ಯಾಕ್ಸಿಗಳನ್ನು ಕೊಟ್ಟಿದ್ದೆವು, ಈಗ ಅದನ್ನು 25 ಟ್ಯಾಕ್ಸಿಗಳಿಗೆ ಹೆಚ್ಚಿಸಿದ್ದೇವೆ. ಈಗ ಒಟ್ಟು 32 ಟ್ಯಾಕ್ಸಿಗಳನ್ನು ಕೊಟ್ಟಿದ್ದೇವೆ. ನಮಗೆ ಬಂದಿರುವಂತಹ ಅರ್ಜಿಗಳು ಒಟ್ಟು 90; ಈಗ ನಾವು ಎಷ್ಟು ಬೇಕಾದರೂ ಟ್ಯಾಕ್ಸಿಗಳನ್ನು ಕೊಡುತ್ತೇವೆ. ನಾವು ಬೆಂಗಳೂರಿಗೆ 1000 ಟ್ಯಾಕ್ಸಿಗಳನ್ನು ಕೊಡಬೇಕೆಂದು ಇದೆ. ಅದರಲ್ಲಿ ಮಾರುತಿ 1000, ಕಾರು ಅವುಗಳು

ಒಂದು ವರ್ಷದೊಳಗೆ ಬಂದಿರುವಂಥಾದ್ದಕ್ಕೆ ಬೇಡಿಕೆ ಇರುತ್ತದೆ ಎಂದು ನಾವು ಕೊಟ್ಟಿದ್ದೇವೆ. ಅವರಿಗೆ ಒಂದು ಕಂಟ್ರೋಲ್ ರೂಮ್ ಎಂದು ಇರುತ್ತದೆ. ಅಲ್ಲಿಂದ ಅವರಿಗೆ ವೈರ್‌ಲೆಸ್ ರೇಡಿಯೊ ಸೆಟ್ ಇರುತ್ತದೆ. ಅವರಿಗೆ ತಿಳಿಸಿದಾಗ ಅವರು ಮನೆಯ ಬಾಗಿಲಿಗೆ ಬಂದು ಸರ್ವಿಸ್ ಕೊಡುವಂಥಾದ್ದು, ಆ ದೃಷ್ಟಿಯಲ್ಲಿ ಇದು ಬಹಳ ಚೆನ್ನಾಗಿ ಇದೆ. ಇದನ್ನು ಬಹಳ ಜನ ನಿರುದ್ಯೋಗಿ ಯುವಕರು ಇದು ಚೆನ್ನಾಗಿದೆ ಎಂದು ಹೇಳಿದ್ದಾರೆ. ನಮಗೆ ಸಂಪಾದನೆ ಚೆನ್ನಾಗಿದೆ, ಮತ್ತು ಬೇಡಿಕೆ ಇದೆ ಮತ್ತು ಸರ್ವಿಸ್ ಕೊಡುತ್ತೇವೆಂದು ಹೇಳಿದ್ದಾರೆ. ನಾವು ಬೆಂಗಳೂರಿನಲ್ಲಿ ಎಷ್ಟು ಕೇಳಿದರೂ ನಾವು ಕೊಡುತ್ತೇವೆ. ಅದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಿದ್ದೇವೆ. ಅವರು ಅದನ್ನು ಯಾವ್ಯಾವ ರೀತಿಯಲ್ಲಿ ಕೊಡಬೇಕೆಂದು ಇದೆ, ಆದುದರಿಂದ ನಾವು ಕೊಡುವಂಥಾದ್ದಕ್ಕೆ ಏನು ಅಡ್ಡಿಯಿಲ್ಲ, ಎಷ್ಟು ಬೇಕಾದರೂ ಕೊಡುತ್ತೇವೆ. ನಾವು ಉತ್ತರದಲ್ಲಿ 7 ರೇಡಿಯೋ ಟ್ಯಾಕ್ಸಿ ಎಂದು ಹೇಳಿದ್ದೆವು, ಅದು ಇತ್ತೀಚೆಗೆ 25ಕ್ಕೆ ಹೆಚ್ಚಿಸಿದ್ದೇವೆ. ಇದರಲ್ಲಿ ಬಂದಿರುವಂತಹ ಆದಾಯ 43,992 ರೂಪಾಯಿಗಳು, ಈಗ 1,92,000 ರೂಪಾಯಿಗಳು ಬಂದಿದೆ.

ಗುಳ್ಳೇದಗುಡ್ಡ ಕ್ಷೇತ್ರದ ಗುಡೂರ ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್‌ನಿಲ್ದಾಣದ ನಿರ್ಮಾಣ.

53(364) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳ್ಳೇದಗುಡ್ಡ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತಕ್ಷೇತ್ರದ ಗುಡೂರ ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು;

ಇ) ಗುಡೂರು ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್ ನಿಲ್ದಾಣಕ್ಕಾಗಿ ಗ್ರಾಮಸ್ಥರು ಉಚಿತವಾಗಿ ಜಾಗ ನೀಡಲು ಸಿದ್ದರಿದ್ದರೂ ಸರ್ಕಾರ ಈ ಬಗ್ಗೆ ನಿರ್ಲಕ್ಷಿಸುತ್ತಿರಲು ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬಂದಿದೆ.

ಆ) ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಜಾಗವನ್ನು ಪಡೆಯಲು ಸಂಸ್ಥೆಯು ಪರಿಶೀಲಿಸುತ್ತಿದೆ.

ಇ) ಗುಡೂರ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಅತ್ಯಾವಶ್ಯಕವಿರುವ 1 ಎಕರೆ 21 ಗುಂಟೆ ಜಮೀನನ್ನು ದಾನದ ರೂಪದಲ್ಲಿ ನೀಡಲು ಗ್ರಾಮಸ್ಥರು ಈಗ ಮುಂದೆ ಬಂದಿದ್ದು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಮುಂದಿನ ಕ್ರಮ